# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1417
ಉತ್ತರ ದಿನಾಂಕ : 18.03.2020

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವ್ಯಾಪಕ ಮಳೆ ಸುರಿದು, 110 ತಾಲ್ಲೂಕುಗಳಲ್ಲಿ ಪ್ರವಾಹ ಬಂದರೂ ಸಹ ಆಪರೇಷನ್ ವರ್ಷಧಾರೆ ಹೆಸರಿನಲ್ಲಿ ಮೋಡಬಿತ್ತನೆಗೆ ಸರ್ಕಾರ ಚಾಲನೆ ನೀಡಿದೆಯೇ; | ಮೋಡಬಿತ್ತನೆ ಕಾರ್ಯಾಚರಣೆಯನ್ನು ಮಳೆ ಪ್ರಮಾಣ ಕಡಿಮೆ ಇದ್ದ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ. ಪ್ರವಾಹ ಬಂದ ಮೇಲೆ ಕಾರ್ಯಾಚರಣೆ ನಡೆಸಿರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಈ ಯೋಜನೆಗೆ 2019-20ರಲ್ಲಿ ಎಷ್ಟು ಹಣವನ್ನು ನಿಗದಿ ಮಾಡಲಾಗಿತ್ತು ಮತ್ತು ಯಾವ ಸಂಸ್ಥೆಗೆ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿಗಧಿ ಮಾಡಲಾಗಿತ್ತು; (ಸಂಪೂರ್ಣ ಮಾಹಿತಿ ನೀಡುವುದು) | 2019ರ ಮೋಡಬಿತ್ತನೆ ಕಾರ್ಯಾಚರಣೆಗೆ ರೂ.45.00ಕೋಟಿ ನಿಗಧಿ ಮಾಡಲಾಗಿರುತ್ತದೆ. ಕಾರ್ಯಾಚರಣೆ ಕೈಗೊಳ್ಳಲು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು, ಗುತ್ತಿಗೆದಾರರಾದ M/s. Kyathi Climate Modification Consultants LLP ರವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. |
| ಇ) | 2019-20 ಮತ್ತು 2020-21 ವರ್ಷಕ್ಕೆ ಮುಂದಿನ ವರ್ಷದ ಮುಂಗಾರು ಹಿಂಗಾರು ಮಳೆ ಬರುವುದಕ್ಕೆ ಮುಂಚಿತವಾಗಿ 2020-21ಕ್ಕೂ ಸಹ ಮೋಡ ಬಿತ್ತನೆಗೆ ಟೆಂಡರ್ ಕರೆಯಲಾಗಿದೆಯೇ; ಈ ಟೆಂಡರ್‌ನಲ್ಲಿ ಎಷ್ಟು ಕಂಪನಿಗಳು/ಸಂಸ್ಥೆಗಳು ಭಾಗಿಯಾಗಿದ್ದವು; (ವಿವರ ನೀಡುವುದು) | 2019ನೇ ವರ್ಷಕ್ಕೆ ಹಾಗೂ 2020ನೇ ವರ್ಷಕ್ಕೆ ಮೋಡ ಬಿತ್ತನೆ ಕಾರ್ಯಾಚರಣೆಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ.<br>2020ನೇ ವರ್ಷದಲ್ಲಿ ಮೋಡಬಿತ್ತನೆ ಕಾರ್ಯಾಚರಣೆಯನ್ನು ನಡೆಸುವ ಹಕ್ಕನ್ನು ಸರ್ಕಾರ ಹೊಂದಿದೆ. ಮಾರ್ಚ್-2020ರ ಅಂತ್ಯದ ಮೊದಲು ಗುತ್ತಿಗೆದಾರರಿಗೆ ತಿಳಿಸಲಾಗುವುದು ಎಂಬ ಷರತ್ತಿನೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.<br>ಟೆಂಡರ್‌ನಲ್ಲಿ ಒಟ್ಟು 02 ಕಂಪನಿಗಳು/ಸಂಸ್ಥೆಗಳು ಭಾಗವಹಿಸಿದ್ದವು.<br>1. M/s. Kyathi Climate Modification Consultants LLP<br>2. Jayaalaxmi Mineral Private Limited. |
| ಈ) | ಅಂತಿಮ ಟೆಂಡರ್ ಅನ್ನು ಯಾವ ಕಂಪನಿಯು ಪಡೆದುಕೊಂಡಿತ್ತು, ಆ ಸಂಸ್ಥೆಯ/ಕಂಪನಿಯ ಹೆಸರೇನು ಈ ಕಂಪನಿ ಯಾರಿಗೆ ಸೇರಿದ್ದು, ಸಂಪೂರ್ಣ ಮಾಹಿತಿ ನೀಡುವುದು; | 2019ನೇ ಹಾಗೂ 2020ನೇ ವರ್ಷಕ್ಕೆ ಮಳೆಗಾಲದಲ್ಲಿ ಮೋಡಬಿತ್ತನೆ ಕಾರ್ಯಾಚರಣೆಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು, ಗುತ್ತಿಗೆದಾರರಾದ M/s. Kyathi Climate Modification Consultants LLP ರವರೊಂದಿಗೆ ಕರಾರು ಮಾಡಿಕೊಳ್ಳಲಾಗಿದೆ. ಸದರಿ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟ್‌ನರ್ ಶ್ರೀ ಪ್ರಕಾಶ್ ಕೆ.ಕೆ ರವರಾಗಿರುತ್ತಾರೆ. |
| ಉ) | ಈ ಹಿಂದೆ ಮೋಡ ಬಿತ್ತನೆ ಮಾಡಿದ್ದು, ಈ ಬಿತ್ತನೆಯ ಯೋಜನೆ ಫಲ ನೀಡಿರುವ ಬಗ್ಗೆ ವೈಜ್ಞಾನಿಕ ವರದಿ ಇಲ್ಲದಿದ್ದರೂ ಸಹ ಈ ದುಂದು ವೆಚ್ಚದ ಯೋಜನೆಯನ್ನು ಸರ್ಕಾರ ಯಾರ ಹಿತಕ್ಕಾಗಿ ಕೈಗೊಂಡಿತ್ತು ಎಂಬುದರ ಬಗ್ಗೆ ಪೂರ್ಣ ದಾಖಲೆಗಳೊಂದಿಗೆ ಮಾಹಿತಿ ನೀಡುವುದು? | ಈ ಹಿಂದೆ 2017ರ ಕಾರ್ಯಾಚರಣೆಯನ್ನು ವಿಷಯ ತಜ್ಞರನ್ನೊಳಗೊಂಡ ತಂಡವು ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸಿ ವರದಿ ಮಾಡಿದೆ. ಮೋಡಬಿತ್ತನೆ ಮಾಡಿದ ಸ್ಥಳಗಳಲ್ಲಿ ಉತ್ತಮ ಮಳೆಯಾಗಿದೆ ಹಾಗೂ ನೈಸರ್ಗಿಕ ಮಳೆಗಿಂತ ಶೇ.27.90ರಷ್ಟು ಹೆಚ್ಚು ಮಳೆಯಾಗಿದೆ ಎಂದು ವರದಿ ಮಾಡಿದ್ದಾರೆ. |

ಸಂ.ಗ್ರಾಕುನೀ&ನೈಇ/128/ಗ್ರಾನೀಸ(5)/2020

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು